ಕರ್ನಾಟಕ ವಿಧಾನಸಭೆ
(ಹನ್ನೆರಡನೇ ವಿಧಾನಸಭೆ)
ಬುಧವಾರ 09ನೇ ಜೂನ್ 2004ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಂಡಿತು
ಹಂಗಾಮಿ ಅಧ್ಯಕ್ಷರು: (ಶ್ರೀ ಆರ್.ವಿ. ದೇಶಪಾಂಡೆ)
ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ಹಂಗಾಮಿ ಅಧ್ಯಕ್ಷರು:– ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಉಪ ಮುಖ್ಯಮಂತ್ರಿಗಳೇ, ಗೌರವಾನ್ವಿತ ಮಂತ್ರಿಮಂಡಲದ ಸದಸ್ಯರೇ, ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರೇ, ಗೌರವಾನ್ವಿತ ಸದಸ್ಯರುಗಳೇ, ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತದ ಪ್ರಜಾಪ್ರಭುತ್ವ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಈ ವೈಶಿಷ್ಟ್ಯಪೂರ್ಣ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಮಹತ್ವದ ಪಾತ್ರವನ್ನು ನಿರ್ವಹಿಸುವ ಪ್ರಾರಂಭದಲ್ಲಿ ಸಮಾಜದ ಏಳಿಗೆ ಮತ್ತು ಪ್ರಗತಿಗಾಗಿ ಸಂವಿಧಾನ ರೀತ್ಯಾ ಜನಪ್ರತಿನಿಧಿಗಳು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಇಂತಹ ವೈಶಿಷ್ಟ್ಯಪೂರ್ಣ ಪ್ರಮಾಣ ವಚನ ಮುಗಿಸುವ ಗುರುತರವಾದ ಜವಾಬ್ದಾರಿಯನ್ನು ಗೌರವಾನ್ವಿತ ರಾಜ್ಯಪಾಲರು ನನ್ನ ಪಾಲಿಗೆ ವಹಿಸಿರುತ್ತಾರೆ. ಇದಕ್ಕೆ ಅನುಗುಣವಾಗಿ ನಾವೆಲ್ಲರೂ ಪ್ರಾಮಾಣಿಕವಾಗಿ ಶ್ರದ್ಧೆ ಮತ್ತು ನಿಷ್ಠೆಯಿಂದ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ ಎಂದು ನಿಮ್ಮಗಳಲ್ಲಿ ಆಶಿಸುತ್ತೇನೆ. ನೂತನವಾಗಿ ವಿಧಾನಸಭೆಗೆ ಆಯ್ಕೆಯಾದ ತಮಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು. ಈಗ ಒಂದು ಪ್ರಕಟಣೆ.

1. ಪ್ರಕಟಣೆ
ವಿಷಯ:– ಅಧ್ಯಕ್ಷರ ನಾಮನಿರ್ದೇಶನ

ಹಂಗಾಮಿ ಅಧ್ಯಕ್ಷರು:– ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಗಿನ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನ ಸಮಯದಲ್ಲಿ ನನ್ನ ಗೈರು ಹಾಜರಿಯಲ್ಲಿ ಸಭೆಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂತೆ ನಾನು ನಾಮನಿರ್ದೇಶನ ಮಾಡುತ್ತೇನೆ.

1. ಶ್ರೀ ಅಂಜನಮೂರ್ತಿ
2. ಶ್ರೀ ಅರಗ ಜ್ಞಾನೇಂದ್ರ
3. ಶ್ರೀ ಬಿ.ಆರ್. ಪಾಟೀಲ್
4. ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ

2. ಸದಸ್ಯರಾದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು:– ಈಗ ಪ್ರಮಾಣ ವಚನ ಕಾರ್ಯಕ್ರಮ ನಡೆಸಲು ಕಾರ್ಯದರ್ಶಿಯವರು ಮಾನ್ಯ ಸದಸ್ಯರುಗಳ ಹೆಸರುಗಳನ್ನು ಕರೆಯುವ ಮೂಲಕ ಪ್ರಾರಂಭಿಸಬೇಕೆಂದು ಹೇಳುತ್ತೇನೆ.